

ಕವಿತೆ




**ಅಪರ್ಣಾ ಹೆಗಡೆ**

ಕಲೆ: ರೂಪಶ್ರೀ ಕಲ್ಲಿಗನೂರು


# ಕಿನಾರೆಯ ಅಂಗಡಿಯವನು

ಪುಟಿವ ಹನಿಯ ಮಳೆ ಧಾರೆ
ಉಕ್ಕುವ ನದಿ
ಕಿನಾರೆಯಲ್ಲಿ ಅಂಗಡಿಯ ಇಟ್ಟು ಕಾಯುವ ಆ ಅವನು
ದಾಟಲಾಗದ ಇವಳು

ಕಿನಾರೆಯಲ್ಲಿನ ಅವನ ಅಂಗಡಿಯಲ್ಲಿ
ಅವಳ ಕಣ್ಣ ಬೆಳಕಿನ ಆಕಾಶ ಗೂಡು
ಕಿಣಿಕಿಣಿ ಶಬ್ದದ ಗಾಜಿನ ಬಳೆ
ಪದೇಪದೇ ಮುಂಗುರುಳ ತಿಕ್ಕಿಕೊಳ್ಳುವಾಗ
ಅವಳು ಇಣುಕುವ ಕನ್ನಡಿ

ಲಂಗದ ತುದಿಯ ಗುಲಾಬಿ ಲೇಸು
ಗೆಜ್ಜೆ ಇರದ ಚೈನು, ಜಿಪ್ಪು ಕಿತ್ತ ಪರ್ಸು
ಆದರೂ ಜೋಪಾನ ಅವಳು ಎದೆಯಲ್ಲಿ

ಅಂಗಡಿಯಲ್ಲಿನ ವಸ್ತುಗಳ ಬೆಲೆ ಕೇಳಬೇಡಿ
ಅವರಿಬ್ಬರಿಗಷ್ಟೇ ಗೊತ್ತಿದೆ
ಇನ್ನೊಂದಿಷ್ಟು ಇದೆ ಆ ಅಂಗಡಿಯಲ್ಲಿ
ಪುಟ್ಟ ಪುಟ್ಟ ಡಬ್ಬದಲ್ಲಿ ಮುಚ್ಚಿಟ್ಟ
ಅವಳ ಮಾತು ಮತ್ತು ನಗು.


Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,

© All rights reserved. Reproduction in whole or in part without permission is prohibited.
RNI No 17129/68